

ಅವರಿಗೆ ಸಂಕ್ಷಿಪ್ತವಾಗಿ ವಿಷಯ ತಿಳಿಸಿದ್ದೆ. ಮರುದಿನ ಇನ್ನೊಬ್ಬಾಕೆ ತನ್ನ ಗಂಡನೊಂದಿಗೆ ಬಂದಳು. 'ಅಯ್ಯೋ ಎಂಟಡಿ ಮೇಲಿನಿಂದ ಬಿದ್ದುಬಿಟ್ರಂತೆ. ಸದ್ಯ, ಸೊಂಟ ಗಿಂಟ ಮುರೀಲಿಲ್ವಲ್ಲಾ' ಅಂತ ಸಮಾಧಾನ ವ್ಯಕ್ತಪಡಿಸಿದಳು.

'ಎಂಟು ಅಡಿಯ ಏಣಿ ಇಟ್ಕೊಂಡಿದ್ದೆ' ಅಂತ ಹಿಂದಿನ ದಿನ ಬಂದವರಿಗೆ ಹೇಳಿದ್ದು ಈ ಪ್ರಮಾದಕ್ಕೆ ಕಾರಣವಾಗಿತ್ತು. 'ಮಹಡಿಯ ಮೇಲಿರೋ ನೀರಿನ ಟ್ಯಾಂಕ್ ನೋಡೋಕೆ ಹೋಗಿ ಮೂರು–ನಾಲ್ಕು ಅಡಿ ಎತ್ತರದಿಂದ ಬಿದ್ದಿದ್ದು ಅಷ್ಟೇ. ನೀನು ಹೋಗಿ ಮಹಡಿಯ ಮೇಲಿನಿಂದಲೇ ಕೆಳಕ್ಕೆ ಬಿದ್ರು ಅಂತ ಪ್ರಚಾರ ಮಾಡ್ಬೇಡ ಮಹಾರಾಯತಿ' ಎಂದು ಅವಳಿಗೆ ಹೇಳಿ ಕಳಿಸ್ದೆ. ಇನ್ನೊಂದು ದಿನ ದಂಪತಿಗಳಿಬ್ಬರು ಬಂದು ನೋಡಿಕೊಂಡು ಹೋಗಿದ್ದರು. ಹೊರಗೆ ಹೋದ ತಕ್ಷಣ ಹೆಂಡತಿ ಗಂಡನಿಗೆ ದಬಾಯಿಸಿದರಂತೆ 'ಅಷ್ಟೂ ಗೊತ್ತಾಗಲ್ವೇ ಪೇಷೆಂಟ್ ನೋಡೋಕೆ ಹೋದಾಗ ಬರಿ ಕೈಲಿ ಹೋಗ್ತಾರೇನು' ಅಂತ. ಪಾಪ ಮರುದಿನ ಮತ್ತೆ ಬಂದ ಅವರು ಒಂದು ಕೇಜಿ ಕಿತ್ತಲೆಹಣ್ಣು ಕೊಟ್ಟು ಹೋದರು.

ಬಂದವರೆಲ್ಲಾ ನನ್ನನ್ನು ಬಿಟ್ಟು 'ಕಾಲು ಹೇಗಿದೆ?' ಅಂತ ಕೇಳಿದರೆ ಸ್ವಲ್ಪ ಸಿಟ್ಟೂ ಬರುತ್ತಿತ್ತು. ಹಾಗಾಗಿ 'ನಂಗೂ ಗೊತ್ತಿಲ್ಲ, ಬ್ಯಾಂಡೇಜ್ ಬಿಚ್ಚಿದ ಮೇಲೆ ಕೇಳಿ ಹೇಳ್ತೀನಿ' ಎನ್ನುತ್ತಿದ್ದೆ. ಇನ್ನು ಕೆಲವರು 'ಕಾಲ ಹೇಗೆ ಕಳೀತಿದೀರಿ?' ಎಂದು ಕೇಳುತ್ತಿದ್ದರು. ನಾನಾಗ 'ಸ್ವಲ್ಪ ಕಥಾ ಕಾಲಕ್ಷೇಪ, ಸ್ವಲ್ಪ ವೃಥಾ ಕಾಲಕ್ಷೇಪ' ಎಂದು ಉತ್ತರಿಸುತ್ತಿದ್ದೆ. ನನ್ನ ಸಂಗ್ರಹದ ಎಷ್ಟೋ ಪುಸ್ತಕಗಳನ್ನು ನಾನು ಓದಿರಲೇ ಇಲ್ಲ, ಈಗ ಅದಕ್ಕೆ ಸಾಕಷ್ಟು ಸಮಯ ಸಿಗುತ್ತಿತ್ತು. ಅದು ಕಥಾ ಕಾಲಕ್ಷೇಪ. ಉಳಿದ ಸಮಯ ಕಾಲು ಚಾಚಿಕೊಂಡು ಸೋಮಾರಿಯಾಗಿ ಕೂತಿದ್ದರಿಂದ ಅದು ವೃಥಾ ಕಾಲಕ್ಷೇಪ! ಈ ಉತ್ತರಗಳನ್ನು ಕೇಳಿ 'ಇವರಿಗೆ ಸ್ವಲ್ಪಾನೂ ಸೀರಿಯಸ್‌ನೆಸ್ ಇಲ್ಲ' ಅಂತ ಮನೆಯವಳ ಅಂಬೋಣ. 'ಸೀರಿಯಸ್ ಆಗಿದ್ದಿದ್ರೆ ಈ ನೋವು, ಬ್ಯಾಂಡೇಜ್‌ನ ಕಿರಿಕಿರಿ ಸಹಿಸೋಕೆ ಆಗ್ತಿತ್ತೇ?'ಅನ್ನೋದು ನನ್ನ ಪ್ರಶ್ನೆ.

ನನ್ನ ತಮ್ಮನ ನಾಲ್ಕು ವರ್ಷದ ಮಗು ಟೀಪಾಯ್ ಮೇಲಿದ್ದ ಮಾತ್ರೆಗಳನ್ನು ನೋಡಿ ಕೇಳಿತು 'ದೊಡ್ಡಪ್ಪಾ, ಇಷ್ಟೊಂದು ಮಾತ್ರೆ ಯಾಕೆ ಇಟ್ಕೊಂಡಿದೀರಿ' ಅಂತ. 'ಕಾಲು ಪೆಟ್ಟಾಗಿದ್ಯಲ್ಲ ಮಗು ಅದಕ್ಕೆ' ಅಂದೆ. ಮಾತ್ರೇನ ನುಂಗ್ಬೇಕಾ, ಬ್ಯಾಂಡೇಜ್ ಒಳಕ್ಕೆ ಹಾಕಬೇಕಾ?' ಮುಗ್ಧವಾಗಿ ಕೇಳಿತು ಆ ಮಗು! ಅವರು ಹೊರಟು ನಿಂತಾಗ ಹೇಳಿದೆ 'ಅಷ್ಟು ದೂರದಿಂದ ಬಂದಿದೀರಾ, ಇನ್ನೊಂದೆರಡು ದಿನ ಇದ್ದು ನೋಡ್ಕೊಂಡು ಹೋಗಿ' ಅಂತ. ಕಾಲನ್ನು ನೋಡಲು ಬರುವವರ ಸಂಖ್ಯೆಯೂ ಇಳಿಮುಖವಾಗಿತ್ತು, ಆದ್ದರಿಂದ ನನಗೂ ಕಂಪನಿ ಬೇಕಿತ್ತು.

ನವೆಂಬರ್ ಡಿಸೆಂಬರ್ ಮದುವೆ ಗೃಹಪ್ರವೇಶಗಳ ಕಾಲ. ನನ್ನ ಬ್ಯಾಂಡೇಜ್ ದೆಸೆಯಿಂದ ಹತ್ತಾರು ಸಮಾರಂಭಗಳನ್ನು ಮಿಸ್ ಮಾಡಿಕೊಳ್ಳಬೇಕಾಯಿತು. ಮುಕ್ಕಾಲು ಜನ ಬೈಯ್ಕೊಂಡ್ರು, ಕಾಲಿನ ವಿಷಯ ಗೊತ್ತಿದ್ದ ಕಾಲು ಜನ ಅರ್ಥ ಮಾಡಿಕೊಂಡ್ರು. ಹತ್ತಿರದ ಬಂಧುಗಳ ಒಂದು ಮದುವೆಗಂತೂ ಹೋಗಲೇ ಬೇಕಾಗಿತ್ತು. ಬ್ಯಾಂಡೇಜ್ ಹಾಕ್ಕೊಂಡು ಮದುವೆಗೆ ಹೋಗಿ, ಬಂದವರೆಲ್ಲ ಹುಡುಗ ಹುಡುಗಿಯನ್ನು ನೋಡೋ ಬದಲು ನನ್ನ ಕಾಲನ್ನೇ ನೋಡುವ ಸನ್ನಿವೇಶವನ್ನು ಊಹಿಸಿಕೊಂಡರೇ ಕಸಿವಿಸಿಯಾಗುತ್ತಿತ್ತು.

'ಆರು ವಾರಕ್ಕೆ ಮೂರು ದಿನ ಇದೆ ಅಷ್ಟೇ, ಬ್ಯಾಂಡೇಜ್ ತೆಗೀತೀರಾ?' ಅಂತ ಡಾಕ್ಟರ್‌ನ ಕೇಳಿದ್ರೆ ಸುತಾರಾಂ ಒಪ್ಪಲಿಲ್ಲ ಅವರು. 'ಮದುವೆಗೆ ಹಾಗೇ ಹೋಗಿ, ಏನಂತೆ. ಎಷ್ಟೊಂದು ಜನ ಬಂದು ಮಾತಾಡಿಸ್ತಾರೆ ನೋಡ್ತಾ ಇರಿ' ಎನ್ನುವ ಸಲಹೆಯನ್ನು ಕೊಟ್ಟರು. ಕಡೆಗೊಂದು ಉಪಾಯ ಹೊಳೆಯಿತು, ನಮ್ಮ ಮನೆಯವಳಿಗೆ. ಬ್ಯಾಂಡೇಜ್ ಮುಚ್ಚುವ ಹಾಗೆ ಕಾಲುಚೀಲ ಹಾಕಿಕೊಂಡು ಹೋದವನು ಒಂದು ಕುರ್ಚಿ ಹಿಡಿದು ಸುಮ್ಮನೆ ಕೂತೆ. ಶೂಸ್ ಬಿಚ್ಚಿಟ್ಟಿದಾರೆ ಅಂತ ನೋಡಿದವರು ಅಂದುಕೊಂಡರೇನೋ, ಕಾಲಿನ ಊನ ಯಾರಿಗೂ ತಿಳಿಯದೆ ಮದುವೆಯನ್ನು ನೋಡಿದ ಹಾಗಾಯ್ತು.

ಪ್ರತಿಸಲ ಹೋದಾಗಲೂ ಎರಡು ವಾರ ಬಿಟ್ಟು ಬನ್ನಿ ಅಂತಿದ್ರು ಡಾಕ್ಟ್ರು. ನಾನು ಆಸ್ಪತ್ರೆಗೆ ಹೋಗಲು ಬೇರೆಯವರನ್ನು ಆಶ್ರಯಿಸಬೇಕಾಗಿತ್ತು. ಕೆಲವು ಸಲ ನಮ್ಮ ಅಣ್ಣ, ಅವರು ಊರಲ್ಲಿ ಇಲ್ಲದಿದ್ದಾಗ ಎದುರು ಮನೆಯವರು, ಕೆಲವು ಸಲ ಕಾಲು ನೋಡಲು ಬಂದವರು, ಹೀಗೆ! ಮೊದಲು ಆರು ವಾರ ಅಂದಿದ್ದವರು, ಎಂಟು ವಾರಕ್ಕೆ ಮುಂದುವರೆಸಿದರು. ಫೈಬರ್ ಗ್ಲಾಸಿನ ಬ್ಯಾಂಡೇಜ್ ಒಳಗೇ ಕೆಲವು ಕಡೆ ಮುರಿದು ಅಲ್ಲಲ್ಲಾ ಚುಚ್ಚುತ್ತಾ ಇತ್ತು. ಕಡಿತ, ಉರಿ, ಕೆಟ್ಟ ವಾಸನೆ ಬೇರೆ. ಅಂತೂ ಇಂತೂ ಎಂಟು ವಾರಗಳಾದ ಮೇಲೆ ನರ್ಸ್‌ಗೆ ಬಿಚ್ಚಲು ಹೇಳಿದರು. ಕರೆಂಟಿನ ಚಕ್ರವನ್ನು ಬ್ಯಾಂಡೇಜಿನ ಮೇಲಿಟ್ಟು ಕತ್ತರಿಸುತ್ತಿರುವಾಗ ಕಾಲಿಗೆಲ್ಲಿ ತಗುಲಿ ಗಾಯ ಆದೀತೋ ಎಂಬ ಭಯ ಬೇರೆ ನನಗೆ. 'ಅಂಕಲ್ ಏನಾಗೊಲ್ಲ ಸುಮ್ಮಿರಿ, ಕಾಲಿಗೆ ಟಚ್ ಆದ್ರೆ ನಮಗೆ ಗೊತ್ತಾಗುತ್ತೆ' ಅಂತಿದ್ಲು ಆ ನರ್ಸು. ಪಾಪ ಅವಳಿಗೆ ಗೊತ್ತಾಗೋ ಹೊತ್ತಿಗೆ, ಮೂರು– ನಾಲ್ಕು ಕಡೆ ನನ್ನ ಕಾಲಿನ ಮೇಲೆ ಕೆಂಪು ಗೆರೆಗಳೂ ಮೂಡಿದವು! ಅಂತೂ ಇಂತೂ ಬ್ಯಾಂಡೇಜ್ ಬಿಚ್ಚಿಸಿದ್ದಾಯ್ತು. 'ಇನ್ನೊಂದು ನಾಲ್ಕು ವಾರ ರೆಸ್ಟ್, ಕ್ರೇಪ್ ಬ್ಯಾಂಡೇಜ್ ಹಾಕ್ಕೊಂಡು ಓಡಾಡಿ, ಹದಿನೈದು ದಿನಕ್ಕೊಮ್ಮೆ ಬಂದು ತೋರಿಸಿ' ಎಂದು ಹೇಳಿಕಳ್ಸಿದ್ರು ಡಾಕ್ಟ್ರು.

ಜೀವಾವಧಿ ಶಿಕ್ಷೆಯಾದರೂ ಬೇಗ ಮುಗಿಯುತ್ತೇನೋ, ಕಾಲಿನ ದರ್ಶನ ಪಡೆಯಲು ಎರಡು ತಿಂಗಳು ಕಾದಿದ್ದು ಅದಕ್ಕಿಂತ ಹೆಚ್ಚು ಅನ್ನಿಸಿತ್ತು ನನಗೆ! ನನ್ನ ಕಾಲನ್ನು ನೋಡಿ ನನಗೇ 'ಅಯ್ಯೊ ಪಾಪ' ಅನ್ನಿಸಿತು. ಚರ್ಮವೆಲ್ಲಾ ಅಲ್ಲಲ್ಲಿ ಕಿತ್ತು, ಅರೆಬರೆ ಸಿಪ್ಪೆ ಸುಲಿದ ಗೆಣಸಿನಂತಾಗಿತ್ತು. ಕಾಲು ನೋಡಲು ಬರೋಕೆ ಆಗ್ದೇ ಇದ್ದೋರ್ಗೆ ನಿರಾಸೆಯಾದೀತು ಅಂತ ಬ್ಯಾಂಡೇಜ್ ಹಾಕಿದ ಫೋಟೊ, ಬ್ಯಾಂಡೇಜ್ ಬಿಚ್ಚಿದ ಮೇಲಿನ ಫೋಟೋ ವಾಟ್ಸ್‌ಅಪ್‌ನ ಎಲ್ಲ ಗ್ರೂಪುಗಳಲ್ಲಿ ಹಾಕಿ, ನನ್ನನ್ನು ನೋಡಲು ಈಗಲೂ ಬರಬಹುದು, ಮನೆಯ ಬಾಗಿಲು ಸದಾ ತೆರೆದಿರುತ್ತೆ ನಿಮಗಾಗಿ, ವಿ.ಸೂ: ರಾತ್ರೆ ಸಮಯ ಬಿಟ್ಟು, ಯಾಕಂದ್ರೆ ಇದು ಶನಿ ಸಿಂಗ್ನಾಪುರ ಅಲ್ಲ!' ಅಂತ ಮೆಸೇಜ್ ಹಾಕಿದೆ.

ಎಲ್ಲ ಮುಗೀತು ಅಂದ್ಕೊಂಡೆ. ಒಂದು ದಿನ ವಾಟ್ಸಪ್‌ನಲ್ಲಿ ಇಲ್ಲದ ಮಿತ್ರನೊಬ್ಬ ಬಂದ. ಸ್ವಾಗತಿಸೋಕೆ ಗೇಟ್‌ವರೆಗೆ ಹೋದೆ. ನನ್ನ ಎರಡೂ ಕಾಲುಗಳನ್ನೇ ನೋಡತೊಡಗಿದ. ಅವನಿಗೆ ನಿರಾಸೆಯಾದ ಹಾಗಿತ್ತು 'ಛೇ, ಬ್ಯಾಂಡೇಜ್ ಬಿಚ್ಚಿಬಿಟ್ಟಿದಾರೆ' ಅಂದ.

'ಮಾರಾಯ, ಎರಡು ತಿಂಗ್ಳಿಂದ ಇಟ್ಕಂಡಿದ್ದೆ, ನೀನು ಮೊದಲೇ ಹೇಳಿದ್ರೆ ಇನ್ನೊಂದು ವಾರ ಇಟ್ಕೋತಿದ್ನಪ್ಪ' ಅಂದೆ. 'ಇರ್ಲಿ ಬಿಡು. ನಂಗೂ ಹೇಳೋಕೆ ಗೊತ್ತಾಗ್ಲಿಲ್ಲ, ನೆಕ್ಸ್ಟ್ ಟೈಮ್ ಹೇಳಿ ಬರ್ತೀನಿ' ಅಂದ ಮುಠ್ಠಾಳ!

■